ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ಯೋಜನೆ

782 - ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ ನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಕಾರವಾರ ರೈಲ್ವೆ ಲೈನ್ ಯೋಜನೆಯ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲಾಗಿದೆಯೇ?*

ಆ) *ಇದರ ಅವಶ್ಯಕತೆ ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಬಹಳ ಅನುಕೂಲತೆ ಇದೆಯೆಂದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಹಾಗಾದರೆ ಈ ಯೋಜನೆಗೆ ಎಷ್ಟು ಹಣ ನಿಗಧಿ ಮಾಡಲಾಗಿದೆ ಮತ್ತು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರೈಲ್ವೆಯವರು ಅಂತಿಮ ಸಮೀಕ್ಷೆಯನ್ನು 40 ಕಿ.ಮಿ.ಗೆ ಪೂರೈಸಿದ್ದಾರೆ. ಬಾಕಿ 104 ಕಿ.ಮೀ. ಉದ್ದಕ್ಕೆ ಗುತ್ತಿಗೆದಾರರನ್ನು ಗೊತ್ತುಪಡಿಸಿದೆ.

ಆ) ಹೌದು.

ಇ) ರೈಲ್ವೆಯವರು ಸದರಿ ಯೋಜನೆಯನ್ನು1996-97ರ ಪೂರಕ ಟಿಪ್ಪಣಿಯಲ್ಲಿ ಪ್ರಸ್ತಾವಿಸಿದ್ದರು. ಹಾಗೂ 1.00 ಕೋಟಿ ರೂ. 1996-97ರಲ್ಲಿ ನಿಗದಿಪಡಿಸಿದ್ದರು. ಸಮೀಕ್ಷೆ ಮುಗಿದು ಭೂಸ್ವಾಧೀನದ ನಂತರ ಈ ಯೋಜನೆ ಕೈಗೊಳ್ಳಲು ರೈಲ್ವೆಯವರಿಗೆ ಒತ್ತಾಯಿಸಲಾಗುವುದು.

ಮೀನುಗಾರಿಕೆಗಾಗಿ ರಾಜ್ಯ ಸರ್ಕಾರ ನಿಗದಿಪಡಿಸಿದ ಅನುದಾನ

783 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಮೀನುಗಾರಿಕೆಗಾಗಿ ರಾಜ್ಯ ಸರ್ಕಾರ1996-97, 97-98 ಮತ್ತು 98-99ರಲ್ಲಿ ನಿಗಧಿಪಡಿಸಿದ ಅನುದಾನವೆಷ್ಟು?*

ಆ) *ಇದರಲ್ಲಿ ಖರ್ಚಾದ ಹಣವೆಷ್ಟು? ಖರ್ಚು ಮಾಡದಿರುವ ಹಣವೆಷ್ಟು? ಖರ್ಚು ಮಾಡದಿರಲು ಕಾರಣವೇನು?*

ಇ) *1983ರಲ್ಲಿ ಡೀಸಲ್ ಬೆಲೆ ಲೀಟರ್‌ಗೆ ರೂ.3.50 ಇರುವಾಗ ಮೀನುಗಾರಿಕೆಗೆ ನೀಡುವ ಡೀಸಲ್ ಸಬ್ಸಿಡಿ 0.85 ಇದ್ದು ಪ್ರಸ್ತುತ ಡೀಸಲ್ ಬೆಲೆ ಲೀಟರ್1ರ 12.40 ಇರುವಾಗ ಸಬ್ಸಿಡಿ ದರವನ್ನು ಹೆಚ್ಚು ಮಾಡದಿರಲು ಕಾರಣವೇನು?*

ಈ) *ಈ ವರ್ಷ ಮುಂಗಡ ಪತ್ರದಲ್ಲಿ ಮೀನುಗಾರಿಕೆಗೆ ಸಾಕಷ್ಟು ಹಣ ಒದಗಿಸದೇ ಮೀನುಗಾರಿಕೆಯನ್ನು ಕಡೆಗಣಿಸಲು ಕಾರಣವೇನು?*